**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ರವರ ನ್ಯಾಯಾಲಯ, ಕೊಪ್ಪ</u>**

**<u>ಸಿ.ಸಿ. ನಂ.*282/2022*</u>**

***<u>ಫಿರ್ಯಾಧಿದಾರರುಃ</u>   ಸರ್ಕಾರದ ಪರವಾಗಿ   ಹರಿಹರಪುರ ಪೊಲೀಸರು.***

**ವಿರುದ್ಧ**

***<u>ಆರೋಪಿ/ತರುಃ</u>*** ಎಲ್ ಪರಮೇಶ ಬಿನ್ ತೋತ್ಯಾನಾಯ್ಕ, *51* ವರ್ಷ, ವಾಸ ಅಡವಿಮಲ್ಲನಕೇರಿ ತಾಂಡ, ವರ್ಕನಹಳ್ಳಿ, ಹೂವಿನಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

- - -

**<u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ *313* ರ ಪ್ರಕಾರ ಆರೋಪಿ ಹೇಳಿಕೆ</u>**

ಪ್ರಃ1ಃಅಭಿಯೋಜನೆಯವರ ಸಾಕ್ಷಿದಾರರ ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉಃ ಕೇಳಿದೇನೆ.

ಪ್ರಃ2ಃ ಚಾಸಾ.1 ಶ್ರೀ ಸಿ.ಎ. ಸುರೇಶ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ 2, 3 ನನಗೆ ಪರಿಚಯ. ಚಾಸಾ 4 ನನ್ನ ಆಟೋದ ಪ್ರಯಾಣಿಕರಾಗಿದ್ದರು. ಚಾಸಾ 5 ರಿಂದ ಚಾಸಾ 8 ರವರು ಅಪಘಾತವಾದ ದಿನದಂದು ಸದರಿ ಸ್ಥಳದಲ್ಲಿದ್ದರು. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ದಿಃ20/03/2022 ರಂದು ಚಾಸಾ 4 ರವರು ನನಗೆ ಫೋನ್ ಮಾಡಿ ನಂದಿಗೋಡಿನಿಂದ ಹರಿಹರಪುರಕ್ಕೆ ಕರೆದುಕೊಂಡು ಬರುವಂತೆ ಹೇಳಿದ್ದರು. ನಾನು ನನ್ನ ಆಟೋ ಸಂಖ್ಯೆ ಕೆಎ-18 ಸಿ 1164 ರಲ್ಲಿ ಹೋಗಿ ಚಾಸಾ 4 ರವರನ್ನು ಕರೆದುಕೊಂಡು ಬರುತ್ತಿದ್ದಾಗ ಹರಿಹರಪುರದ ತಾಜ್ ಹೋಟೆಲಿನ ಮುಂಭಾಗ ಮುಖ್ಯ ರಸ್ತೆಯಲ್ಲಿ ನಾನು ಚಾಲನೆ ಮಾಡುತ್ತಾ ರಸ್ತೆಯಲ್ಲಿ ತಿರುಗಿದಾಗ ನನ್ನ ಆಟೋದ ಮುಂಭಾಗಕ್ಕೆ ಕಾರು ಡಿಕ್ಕಿ ಹೊಡೆಸಿದ್ದು ಆಟೋ ಪಲ್ಟಿಯಾಗಿರುತ್ತದೆ. ಸದರಿ ಕಾರಿನ ಸಂಖ್ಯೆ ಕೆಎ-35/ ಬಿ-6610 ಆಗಿರುತ್ತದೆ. ಅತಿವೇಗವಾಗಿ, ಅಜಾಗರೂಕತೆಯಿಂದ ಬಂದ ಕಾರು ಡಿಕ್ಕಿಪಡಿಸಿರುತ್ತದೆ. ಸದರಿ ಅಪಘಾತದಿಂದಾಗಿ ಚಾಸಾ 4 ರವರಿಗೆ ಕಾಲಿಗೆ ಪೆಟ್ಟಾಗಿದ್ದು, ನನಗೂ ಸಹಾ ಪೆಟ್ಟಾಗಿತ್ತು. ನಾನು ಬೇರೆ ಆಟೋದಲ್ಲಿ

ಕೊಪ್ಪ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದೆನು. ಚಾಸಾ 4 ರವರು ಕೊಪ್ಪದ ಪ್ರಶಮನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಹೆಚ್ಚಿನ ಚಿಕಿತ್ಸೆಯನ್ನು ಬೇರೆ ಕಡೆ ಪಡೆದಿರುತ್ತಾರೆ. ಸದರಿ ಅಪಘಾತವನ್ನು ಪರಮೇಶ್ ಎಂಬಾತನು ಮಾಡಿರುತ್ತಾರೆ. ಸದರಿ ಅಪಘಾತದ ಸಂಬಂಧವಾಗಿ ನಾನು ಹರಿಹರಪುರ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಂತರ ಸದರಿ ಪೋಲಿಸರು ಅದೇ ದಿನ ಅಪಘಾತವಾದ ಸ್ಥಳಕ್ಕೆ ಬಂದು ಸ್ಥಳ ಮಹಜರ್ ಮಾಡಿರುತ್ತಾರೆ. ಸದರಿ ಸಮಯದಲ್ಲಿ ಚಾಸಾ.2 ಮತ್ತು ಚಾಸಾ.3 ರವರು ಹಾಜರಿದ್ದರು. ಸದರಿ ಸಮಯದಲ್ಲಿ ಅಪಘಾತವಾದ ಸ್ಥಳವನ್ನು ಚಾಸಾ 2 ಮತ್ತು ಚಾಸಾ.3 ರವರೇ ತೋರಿಸಿರುತ್ತಾರೆ. ಅದರಲ್ಲಿ ಒಂದು ವಾಹನವನ್ನು ಪೊಲಿಸ್ ಠಾಣೆಗೆ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಮಹಜರನ್ನು ಸಂಜೆ 5-00 ರಿಂದ 6-00 ವರೆಗೂ ಜರುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ3ಃ ಚಾಸಾ.2 ಶ್ರೀ ಗುರುರಾಜ, ಇವರು ತಮ್ಮ ಸಾಕ್ಷ್ಯದಲ್ಲಿ ನಿಪಿ.2 ಸ್ಥಳ ಮಹಜರಿನಲ್ಲಿರುವ ಸಹಿಯನ್ನು ಹರಿಹರಪುರದ ತಾಜ್ ಹೋಟೆಲಿನ ಮುಂಭಾಗ ದಿನಾಂಕಃ20/03/2022 ರಂದು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು ಹಾಗೂ ಚಾಸಾ 3 ರವರು ಹಾಜರಿದ್ದೆವು. ಸದರಿ ಸ್ಥಳವನ್ನು ಪೋಲಿಸರಿಗೆ ಚಾಸಾ 1 ರವರು ತೋರಿಸಿರುತ್ತಾರೆ. ಸದರಿ ಮಹಜರನ್ನು ಸಂಜೆ 5 ರಿಂದ 6 ಗಂಟೆವರೆಗೆ ಜರುಗಿಸಲಾಯಿತು. ಮಹಜರ್ ಕಾಲದಲ್ಲಿ ನಿಪಿ.3 ರಿಂದ 5 ಅನ್ನು ತೆಗೆಯಲಾಗಿತ್ತು. ಆ ಸಮಯದಲ್ಲಿ ಅಪಘಾತಕ್ಕೆ ಒಳಗಾಗಿದ್ದ ವಾಹನ ಕೆಎ- 18 ಸಿ 1164 ಅನ್ನು, ಕೆಎ-35/ಬಿ-6610 ಅನ್ನು ಪೋಲಿಸರು ತಮ್ಮ ವಶಕ್ಕೆ ಪಡೆದಿದ್ದರು ಎಂದು ನುಡಿಯುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ4ಃ ಚಾಸಾ.12 ಶ್ರೀ ಡಾಃ ಎಲ್ ಶಿವಕುಮಾರ್, ವೈದ್ಯಾಧಿಕಾರಿಗಳು, ಸರ್ಕಾರಿ ಆಸ್ಪತ್ರೆ, ಕೊಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20.03.2022 ರಂದು ಸುಮಾರು ಮಧ್ಯಾಹ್ನ 1.45 ಗಂಟೆ ಸಮಯದಲ್ಲಿ ಸುರೇಶ, ಸುಮಾರು 48 ವರ್ಷ, ಇವರು ಇವರ ಹೆಂಡತಿಯೊಂದಿಗೆ ದಿನಾಂಕ 20.3.2022 ರಂದು

ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ರಸ್ತೆ ಅಪಘಾತವಾದ ಬಗ್ಗೆ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಸದರಿಯವರನ್ನು ಪರೀಕ್ಷಿಸಿದಾಗ ಸದರಿಯವರ ಬಲಭಾಗದ ಎದೆಯ ಮೇಲೆ 3x3 ಸೆಂ.ಮೀ x 0.5 ಸೆಂ.ಮೀ ಅಳತೆಯ ಕತ್ತರಿಸಿದ ಸೀಳಿರುವ ಗಾಯ ಹಾಗೂ ಬಲಭಾಗದ ಎದೆಯ ಮೇಲೆ ಹಾಗೂ ಮೂಳೆಗೆ ಗಾಯವಾಗಿದ್ದಾಗಿ ಕಾಣಿಸಿಕೊಂಡಿದ್ದು, ಸದರಿ ಗಾಯವು ಸಾಮಾನ್ಯ ಸ್ವರೂಪದ ಗಾಯವೆಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಒಬ್ಬ ವ್ಯಕ್ತಿಯು ರಸ್ತೆ ಅಪಘಾತದಲ್ಲಿ ಸಿಲುಕಿದರೆ, ಮೇಲೆ ತಿಳಿಸಿದ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ5ಃ ಚಾಸಾ.10 ಶ್ರೀ ಡಾಃ ಉಮೇಶ್ ಕಾಮತ್, ವೈದ್ಯಾಧಿಕಾರಿಗಳು, ನಂಜಪ್ಪ ಆಸ್ಪತ್ರೆ, ಶಿವಮೊಗ್ಗ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.03.2022 ರಂದು ಸುಮಾರು ರಾತ್ರಿ 10.30 ಗಂಟೆಗೆ ಸಮಯದಲ್ಲಿ ಜಯಮ್ಮ ಕೋಂ ಬೆಳ್ಳಪ್ಪ ಗೌಡ, ಸುಮಾರು 70 ವರ್ಷ, ಇವರು ದಿನಾಂಕ 20.3.2022 ರಂದು ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ರಸ್ತೆ ಅಪಘಾತವಾದ ಬಗ್ಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಚಾಸಾ.4 ಜಯಮ್ಮರವರಿಗೆ ಉಸಿರಾಟದ ತೊಂದರೆಯೆಂದು ನನ್ನ ಬಳಿ ಚಾಸಾ.12 ಡಾಃ ಶಿವಕುಮಾರ್ ರವರು ಕಳುಹಿಸಿದ್ದು, ಚಾಸಾ.4 ರವರನ್ನು ಪರೀಕ್ಷಿಸಿದಾಗ ಚಾಸಾ.4 ರವರ ಬಲಕಾಲು ಈಗಾಗಲೇ ಮುರಿದಿರುತ್ತದೆ. ಸದರಿಯವರಿಗೆ ಗಾಯದ ಪ್ರಮಾಣ ಪತ್ರವನ್ನು ನೀಡಿ, ದಿನಾಂಕ 31.03.2022 ರಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿರುತ್ತೇನೆ. ಒಬ್ಬ ವ್ಯಕ್ತಿಯು ರಸ್ತೆ ಅಪಘಾತದಲ್ಲಿ ಸಿಲುಕಿದರೆ ನಿಪಿ.10 ರಲ್ಲಿ ನಮೂದಿಸಿರುವ ಗಾಯ ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ6ಃ ಚಾಸಾ11 ಶ್ರೀ ಡಾಃ ಉದಯ್ ಶಂಕರ್, ವೈದ್ಯಾಧಿಕಾರಿಗಳು, ಪ್ರಶಮನಿ ಆಸ್ಪತ್ರೆ, ಕೊಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 23.03.2022 ರಂದು ಸುಮಾರು ಮಧ್ಯಾಹ್ನ 2.55 ಗಂಟೆಗೆ ಸಮಯದಲ್ಲಿ ಜಯಮ್ಮ ಕೋಂ ಬೆಳ್ಳಪ್ಪ ಗೌಡ, ಸುಮಾರು 68 ವರ್ಷ, ವಾಸ ನಂದಿಗೋಡು, ನಿಲುವಾಗಿಲು,

ಕೊಪ್ಪ ತಾಲ್ಲೂಕು ಇವರು ದಿನಾಂಕ 20.3.2022 ರಂದು ಮಧ್ಯಾಹ್ನ 1.15 ಗಂಟೆ ಸಮಯದಲ್ಲಿ ಹರಿಹರಪುರದ ಅನ್ನಪೂರ್ಣ ಹೋಟೆಲ್ ಹತ್ತಿರ ರಸ್ತೆ ಅಪಘಾತವಾದ ಬಗ್ಗೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದು ಸದರಿಯವರನ್ನು ಪರಿಶೀಲಿಸಲಾಗಿ 1) ಬಲಕಾಲಿನ ಕೆಳಭಾಗ ಮುರಿತ, 2) ಬಲ ಪಕ್ಕೆಲುಬು ಸವೆತ, 3) ಎರಡೂ ಮುಂದೋಳುಗಳು ಮತ್ತು ಮೊಣಕಾಲು ಸವೆತ ಮತ್ತು 4) ಪಾದದ ಮೇಲೆ ಸವೆತದ ಗಾಯಾಳಾಗಿರುತ್ತವೆ. ನನ್ನ ಅಭಿಪ್ರಾಯದಲ್ಲಿ ಕ್ರಮ ಸಂಖ್ಯೆ 1 ಮತ್ತು 2ರಲ್ಲಿ ನಮೂದಿಸಿರುವ ಗಾಯಗಳು ತೀವ್ರ ಸ್ವರೂಪದ ಗಾಯಗಳು ಹಾಗೂ ಕ್ರಮ ಸಂಖ್ಯೆ 3 ಮತ್ತು 4ರಲ್ಲಿ ನಮೂದಿಸಿರುವ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಒಬ್ಬ ವ್ಯಕ್ತಿಯು ರಸ್ತೆ ಅಪಘಾತದಲ್ಲಿ ಸಿಲುಕಿದರೆ, ಮೇಲೆ ನಮೂದಿಸಿರುವ ಗಾಯಗಳು ಸಂಭವಿಸುವ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ7ಃ ಚಾಸಾ.14 ಶ್ರೀ ತಿಪ್ಪೇಶ್ ಜಿ., ಮುಖ್ಯಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ20/03/2021ರಂದು ನಾನು ಹಗಲು ಠಾಣಾ ಕರ್ತವ್ಯದಲ್ಲಿದ್ದಾಗ ಕೊಪ್ಪ ಸರ್ಕಾರಿ ಆಸ್ಪತ್ರೆಯ ಇಂಟಿಮೇಶನ್ ಪಡೆದು 2-20 ಕ್ಕೆ ಹಾಜರಾಗಿದ್ದು, ಇಂಟೀಮೇಶ್ ಪಡೆದು ನಂತರ ಕೊಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಗಾಯಾಳು ಚಾಸಾ.1 ಸಿ.ಎ. ಸುರೇಶ ರವರ ಹೇಳಿಕೆಯನ್ನು ಮಧ್ಯಾಹ್ನ 3 ರಿಂದ 3-45 ಗಂಟೆಯವರೆಗೆ ಪಡೆದಿರುತ್ತೇನೆ. ವಾಪಾಸು ಠಾಣೆಗೆ ಹಾಜರಾಗಿ ಹರಿಹರಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 16/2022 ರಲ್ಲಿ ಐ.ಪಿ.ಸಿ. ಕಲಂ 279, 337 ರಂತೆ ಪ್ರಕರಣ ದಾಖಲು ಮಾಡಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ನಂತರ 5 ಗಂಟೆಗೆ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಹರಿಹರಪುರದ ತಾಜ್ ಹೋಟೆಲಿನ ಮುಂಭಾಗ ಆಗುಂಬೆ - ಕೊಪ್ಪ ರಸ್ತೆಯಲ್ಲಿದ್ದ ಪಂಚಾಯ್ತಿದಾರರಾದ ಚಾಸಾ.2 ಹಾಗೂ ಚಾಸಾ.3 ರವರ ಸಮಕ್ಷಮ 5-10 ರಿಂದ 6-00 ಗಂಟೆ ವರೆಗೆ ಕೃತ್ಯ ನಡೆದಿದೆ ಎನ್ನಲಾದ ಸ್ಥಳವನ್ನು ಚಾಸಾ.1ರವರು ತೋರಿಸಿದ ಮೇರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ಕಾಲದಲ್ಲಿ ಕೆಎ-35 ಬಿ 6610ರ ಕಾರು ಕೆಎ 18 ಸಿ

1164 ರ ಪ್ಯಾಸೆಂಜರ್ ಆಟೋವನ್ನು ಐ.ಎಂ.ವಿ. ವರದಿಗಾಗಿ ವಶಕ್ಕೆ ಪಡೆದಿರುತ್ತೇನೆ. ಮಹಜರ್ ಕಾಲದಲ್ಲಿ ಮೊಬೈಲ್ ನಲ್ಲಿ ಪೋಟೋ ತೆಗೆದಿರುತ್ತೇನೆ. ನಂತರ ವಶಕ್ಕೆ ಪಡೆದ ವಾಹನವನ್ನು ಮಾಲುಪಟ್ಟಿ 18/2022 ರಲ್ಲಿ ನೊಂದಾಯಿಸಿ ಅನುಮತಿ ಕೋರಿರುತ್ತೇನೆ. ಅದೇ ದಿನ ಚಾಸಾ.7 ಮತ್ತು ಚಾಸಾ.8 ರವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದಿರುತ್ತೇನೆ. ದಿಃ21/03/2022 ರಂದು ಚಾಸಾ.5, ಚಾಸಾ.6 ಹಾಗೂ ಚಾಸಾ.9 ರವರ ಹೇಳಿಕೆ ಪಡೆದಿರುತ್ತೇನೆ. ಮಹಜರ ಕಾಲದಲ್ಲಿ ತೆಗೆದ ಪೊಟೋಗಳನ್ನು ಸಿ.ಡಿ.ಗೆ ಅಳವಡಿಸಿ, 65 ಬಿ ದೃಢೀಕರಣ ನೀಡಿರುತ್ತೇನೆ, ದಿಃ25/03/2022 ರಂದು ಆಟೋ ದಾಖಲಾತಿ ಪರೀಶೀಲಿಸಿ ಇಂಡೆಮ್ನಿಟಿ ಬಾಂಡ್ ಪಡೆದು ಮಾಲೀಕರ ವಶಕ್ಕೆ ನೀಡಿರುತ್ತೇನೆ. ದಿಃ29/04/2022 ರಂದು ನ್ಯಾಯಾಲಯದ ಆದೇಶದಂತೆ ಕೆಎ-35 ಬಿ 6610 ಸ್ವಿಪ್ಟ್ ಕಾರನ್ನು ಮಾಲೀಕರ ವಶಕ್ಕೆ ನೀಡಿರುತ್ತೇನೆ. ದಿಃ29/04/2022 ರಂದು ಠಾಣಾ ಆವರಣದಲ್ಲಿ ನ್ಯಾಯಾಲಯದ ಆದೇಶದಂತೆ ಸಾಕ್ಷಿದಾರರಾದ ದಿಲಾವರ್ ಬಿನ್ ಫಜುಲ್‌ಹಕ್‌ರವರ ಸಮಕ್ಷಮ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ. ದಿಃ03/04/2022 ರಂದು ಚಾಸಾ 4 ರವರ ಗಾಯಾಳು ಹೇಳಿಕೆ ಪಡೆದಿರುತ್ತೇನೆ. ದಿಃ25/04/2022 ರಂದು ಚಾಸಾ.13 ರವರಿಂದ ಐಎಂವಿ ವರದಿ ಪಡೆದಿರುತ್ತೇನೆ. ದಿಃ07/05/2022 ರಂದು ಚಾಸಾ 4 ರವರ ನಂಜಪ್ಪ ಆಸ್ಪತ್ರೆಯಿಂದ ಬಂದ ಗಾಯದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ದಿಃ19/05/2022 ರಂದು ಕೊಪ್ಪ ಪ್ರಶಮನಿ ಆಸ್ಪತ್ರೆಯಿಂದ ಚಾಸಾ.4 ರವರ ಗಾಯದ ಪ್ರಮಾಣಪತ್ರ ಪಡೆದಿರುತ್ತೇನೆ. ದಿಃ06/04/2022 ರಂದು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ನಂತರ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನಿವೇನು ಹೇಳುವಿರಿ?

ಉಃ ಸುಳ್ಳು

ಪ್ರಃ9ಃ  ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

ಉಃ     ಇಲ್ಲ

ಪ್ರಃ9ಃ  ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೆ?

ಉಃ       ಇಲ್ಲ

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ  23.03.2026

ಸಹಿ/- 23.03.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.